ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 27-09-1971.

***ಸ್ನೇಹದ ಶಕ್ತಿಯ ಮೂಲಕ ಸತ್ಯತೆಯ ಪ್ರತ್ಯಕ್ಷತೆ*** (स्नेह की शक्ति द्वारा सत्यता की प्रत्यक्षता)

ಈ ಸಮಯದಲ್ಲಿ ಎಲ್ಲರ ಸ್ಮೃತಿಯಲ್ಲಿ ಹಾಗೂ ನಯನಗಳಲ್ಲಿ ಏನಿದೆ? ಒಂದೇ ವಿಷಯವಿದೆಯೋ ಅಥವಾ ಎರೆಡು ವಿಷಯಗಳಿವೆಯೋ ಅಥವಾ ಒಂದರಲ್ಲಿ ಎರೆಡು ವಿಷಯಗಳಿವೆಯೋ? ಅದು ಏನಾಗಿದೆ? (ಒಬ್ಬರೇ ತಂದೆ ಯಾಗಿದ್ದಾರೆ) ಇಂದು ಎಲ್ಲರೂ ಏಕಮತ ಹಾಗೂ ಒಂದೇ ವಿಷಯಲ್ಲಿದ್ದೀರಿ. ಒಳ್ಳೆಯದು- ಈ ಸಮಯದಲ್ಲಂತೂ ಒಂದುಮಾತಿದೆ ಆದರೆ ಹಾಗೆಯೇ ವರ್ತಮಾನ ಸಮಯ ಸ್ಮೃತಿಯಲ್ಲಿ ಹಾಗೂ ನಯನಗಳಲ್ಲಿ ಏನಿರುತ್ತದೆ? ಕೇವಲ ಮನೆಗೆ ಹೋಗಬೇಕಾಗಿದೆ ಎಂಬುದೇ ನೆನಪಿರುತ್ತದೆಯೇ? ಸೇವೆ ಮಾಡದೆ ಹೇಗೆ ಹೋಗುವಿರಿ? ಆಸ್ತಿಯೂ ಸಹ ತನಗಾಗಿ ನೆನಪಿತ್ತು ಆದರೆ ಅನ್ಯರಿಗೂ ಆಸ್ತಿ ಕೊಡಿಸಬೇಕು ಎಂಬುದು ನೆನಪಿರಬೇಕಾಗಿದೆ. ಪ್ರತೀ ಹೆಜ್ಜೆಯಲ್ಲಿ, ಸ್ಮೃತಿಯಲ್ಲಿ ತಂದೆಯ ನೆನಪು ಹಾಗೂ ಜೊತೆಜೊತೆಗೆ ಸೇವೆ ನೆನಪಿರುತ್ತದೆಯೇ? ನಡೆಯುತ್ತಾ- ತಿರುಗಾಡುತ್ತಾ, ಕರ್ಮ ಮಾಡುತ್ತಾ ಒಂದುವೇಳೆ ನಾವು ಪ್ರತೀ ಸಮಯ ಈಶ್ವರೀಯ ಸೇವಾರ್ಥವಾಗಿ ನಿಮಿತ್ತರಾಗಿದ್ದೇವೆ. ಸ್ಥೂಲಕಾರ್ಯ ಮಾಡುತ್ತಿದ್ದರೂ ಈಶ್ವರೀಯ ಸೇವೆಗೆ ನಿಮಿತ್ತರಾಗಿದ್ದೇವೆ. ಎಂದು ಸ್ಮೃತಿಯಿದ್ದರೆ ಹಾಗೂ ಸದಾ ನಿಮಿತ್ತ ಎಂದು ತಿಳಿದರೆ ಯಾವುದೇ ಡಿಸ್‌ಸರ್ವೀಸ್ ಆಗುವ ಕರ್ಮವು ನಿಮ್ಮಿಂದ ಆಗುವುದಿಲ್ಲ. ಈ ಸ್ಮೃತಿಯು ಮರೆತುಹೋಗುತ್ತದೆ ಆದ್ದರಿಂದಲೇ ಸಾಧಾರಣಕರ್ಮ ಹಾಗೂ ಸಾಧಾರಣರೀತಿಯಿಂದ ಸಮಯವು ಕಳೆದುಹೋಗುತ್ತಾ ಇರುತ್ತದೆ. ಹೇಗೆ ಯಾವುದಾದರೂ ವಿಶೇಷ ಸೇವೆಗೆ ನಿಮಿತ್ತರಾಗುತ್ತೀರೆಂದರೆ ಎಷ್ಟು ಸಮಯ ವಿಶೇಷ ಸೇವೆಯ ರೂಪ ಮುಂದಿರುತ್ತದೆಯೋ ಅಷ್ಟು ಸಮಯ ಸ್ಥಿತಿಯು ಚೆನ್ನಾಗಿರುತ್ತದೆಯಲ್ಲವೆ ಏಕೆಂದರೆ ಈ ಸಮಯದಲ್ಲಿ ನಾನು ಎಲ್ಲರಮುಂದೆ ಸೇವೆಗಾಗಿ ನಿಮಿತ್ತನಾಗಿದ್ದೇನೆ ಎಂದು ತಿಳಿದುಕೊಳ್ಳುತ್ತೀರಿ. ಹಾಗೆಯೇ ಸ್ಥೂಲಕಾರ್ಯ ಮಾಡುತ್ತಿದ್ದರೂ ಇದು ಸ್ಮೃತಿಯಲ್ಲಿರಲಿ- ಈ ಸಮಯದಲ್ಲಿ ನಾನು ಮನಸ್ಸಿನ ಮೂಲಕ ವಿಶ್ವಪರಿವರ್ತನೆ ಮಾಡುವ ಸೇವೆಯಲ್ಲಿ ಉಪಸ್ಥಿತನಾಗಿದ್ದೇನೆ. ಆಗ ಗಮನವಿರುತ್ತದೆ, ಚೆಕಿಂಗ್ ಇರುತ್ತದೆ. ಈ ರೀತಿ ಒಂದುವೇಳೆ ಸದಾ ತಮ್ಮನ್ನು ವಿಶ್ವದ ಸ್ಟೇಜಿನ ಮೇಲೆ ವಿಶ್ವಕಲ್ಯಾಣದ ಸೇವಾರ್ಥ ಎಂದು ತಿಳಿದುಕೊಂಡಿದ್ದೇ ಆದರೆ ಸಾಧಾರಣ ಸ್ಥಿತಿ, ಸಾಧಾರಣ ಚಲನೆ, ಆಲಸ್ಯ ಇರುತ್ತದೆಯೇನು? ಇಷ್ಟು ಸಮಯ ವ್ಯರ್ಥವಾಗಿ ಹೋಗುವ ಬದಲು ಸಫಲವಾಗುತ್ತದೆ ಮತ್ತು ಜಮಾದ ಖಾತೆ ಎಷ್ಟು ಹೆಚ್ಚುತ್ತದೆ. ಯಾರ ಮೇಲಾದರೂ ಬಹಳ ಜವಾಬ್ದಾರಿಯಿದ್ದರೆ ಅವರು ತಮ್ಮ ಒಂದೊಂದು ಸೆಕೆಂಡ್ ಬಹಳ ಅಮೂಲ್ಯವೆಂದು ತಿಳಿಯುತ್ತಾರೆ. ಒಂದುವೇಳೆ ಒಂದೆರಡು ನಿಮಿಷಗಳು ವ್ಯರ್ಥವಾಗಿ ಹೋದರೂ ಅವರಿಗೆ ಆ ಎರಡು ನಿಮಿಷಗಳೂ ಸಹ ಬಹಳ ಹೆಚ್ಚು ಸಮಯದಂತೆ ಕಾಣಿಸುತ್ತದೆ ಅಂದಮೇಲೆ ಎಲ್ಲರಿಗಿಂತ ದೊಡ್ಡ ಜವಾಬ್ದಾರಿ ನಿಮ್ಮ ಮೇಲಿದೆ. ನಿಮಗೆ ಈ ಸಮಯದಲ್ಲಿರುವಷ್ಟು ಜವಾಬ್ದಾರಿ ಮತ್ಯಾರದು ಇದೆ? ತಾವು ಇಡೀ ವಿಶ್ವದ ಕಲ್ಯಾಣ, ಜಡ ಹಾಗೂ ಚೈತನ್ಯ ಎರಡನ್ನೂ ಪರಿವರ್ತನೆ ಮಾಡಬೇಕಾಗಿದೆ. ಎಷ್ಟು ದೊಡ್ಡ ಜವಾಬ್ದಾರಿಯೋ ಹಾಗೆಯೇ ಪ್ರತೀ ಸಮಯ ಇದು ಸ್ಮೃತಿಯಲ್ಲಿರಲಿ- ತಂದೆಯು ಈ ಸಮಯದಲ್ಲಿ ಯಾವ ಕರ್ತವ್ಯ ನೀಡಿದ್ದಾರೆ ಎಂದು. ಒಂದು ಕಣ್ಣಿನಲ್ಲಿ ತಂದೆಯ ಸ್ನೇಹ ಮತ್ತೊಂದು ಕಣ್ಣಿನಲ್ಲಿ ತಂದೆಯ ಮುಖಾಂತರ ಸಿಕ್ಕಿರುವ ಕರ್ತವ್ಯ ಅರ್ಥಾತ್ ಸೇವೆ. ಸ್ನೇಹ ಮತ್ತು ಸೇವೆ ಎರಡೂ ಒಟ್ಟೊಟ್ಟಿಗೆ ಇರಲಿ. ಸ್ನೇಹಿಗಳು ಪ್ರಿಯರಾಗಿದ್ದಾರೆ ಆದರೆ ಸೇವಾಧಾರಿ ಜ್ಞಾನಿ ಆತ್ಮರು ಅತಿಪ್ರಿಯರಾಗಿದ್ದಾರೆ. ಆದ್ದರಿಂದ ಎರಡೂ ಜೊತೆಜೊತೆಯಿರಬೇಕು. ಯಾವಾಗ ಇವೆರಡು ಸ್ಮೃತಿಯಿರುವುದೋ ಆಗಲೇ ಸೇವೆ ಮಾಡುವ ಸಮಯದಲ್ಲಿ ಸ್ನೇಹಿಮೂರ್ತಿಗಳಾಗಿರುತ್ತೀರಿ. ಆದರೆ ಕೇವಲ ಸ್ನೇಹವಷ್ಟೇ ಅಲ್ಲ, ಸ್ನೇಹದ ಜೊತೆಗೆ ಮತ್ತೇನು ಬೇಕು? (ಶಕ್ತಿರೂಪ) ಶಕ್ತಿರೂಪರಂತೂ ಆಗುತ್ತೀರಿ ಅದರೆ ಶಕ್ತಿರೂಪದ ಪ್ರತ್ಯಕ್ಷರೂಪ ಏನು ಕಾಣಿಸುವುದು? ಸೇವೆಯ ಫಲಿತಾಂಶದಲ್ಲಿ ಯಾವ ಆಧಾರದ ಮೇಲೆ ಅಂಕಗಳು ಸಿಗುತ್ತವೆ? ಏಕೆಂದರೆ ವಾಣಿಯಲ್ಲಿ ಹರಿತವು ತುಂಬಿದ್ದರೆ ಅರ್ಥಾತ್ ಸ್ನೇಹದ ಜೊತೆಗೆ ಶಬ್ದಗಳಲ್ಲಿ ಇಂತಹ ಹರಿತವಿರಲಿ, ಅವರ ಹೃದಯ ವಿಸ್ತೀರ್ಣವಾಗಿಬಿಡಲಿ, ಇಲ್ಲಿಯವರೆಗಿನ ಫಲಿತಾಂಶವೇನಾಗಿದೆ? ಕೆಲವೊಮ್ಮೆ ಬಹಳ ಶೌರ್ಯ

ತೋರಿಸುತ್ತೀರಿ, ಇಲ್ಲವೆಂದರೆ ಬಹಳ ಸ್ನೇಹತೋರಿಸುತ್ತೀರಿ, ಇಲ್ಲವೆಂದರೆ ಬಹಳ ಹಗುರರೂಪದಲ್ಲಿ ಮಾತನಾಡುತ್ತೀರಿ, ಅಥವಾ ಬಹಳ ಹುರುಪಿನಲ್ಲಿ ಮಾತನಾಡುತ್ತೀರಿ. ಆದರೆ ಹೇಗಿರಬೇಕು? ಒಂದೊಂದು ಶಬ್ದದಲ್ಲಿ ಸ್ನೇಹದ ರೇಖೆಗಳಿರಬೇಕು. ಅನಂತರ ಭಲೆ, ಹೇಗಾದರೂ ಕಠಿಣಶಬ್ದಗಳನ್ನು ಹೇಳಿರಿ ಆದರೆ ಹೃದಯಕ್ಕೆ ಅವಶ್ಯವಾಗಿ ನಾಟುವುದು. ಆ ಶಬ್ದಗಳು ಕಠಿಣವೆನಿಸುವುದಿಲ್ಲ, ಯಥಾರ್ಥವೆನಿಸುತ್ತದೆ. ಈಗಲೇ ಒಂದುವೇಳೆ ತೀಕ್ಷ್ಮವಾಗಿ ಮಾತನಾಡುತ್ತೀರೆಂದರೆ ರೂಪದಲ್ಲಿಯೂ ತೀಕ್ಷ್ಣತೆಯ ಭಾವ ಕಂಡುಬರುವಕಾರಣ ಕೆಲವರು ತಮ್ಮಲ್ಲಿ ಅಭಿಮಾನವಿದೆ ಎಂದು ಹೇಳುತ್ತಾರೆ. ಇಲ್ಲದಿದ್ದರೆ ಅಪಮಾನ ಮಾಡುತ್ತೀರಿ ಎಂದು ಹೇಳುತ್ತಾರೆ. ಆದರೆ ಒಂದುಕಡೆ ಶಕ್ತಿಶಾಲಿಯಾಗಿ ಮಾತನಾಡುತ್ತಾ ಹೋಗಿ, ಇನ್ನೊಂದುಕಡೆ ಸ್ನೇಹವನ್ನೂ ಕೊಡುತ್ತಾ ಹೋಗಿ ಆಗ ತಮ್ಮ ಸ್ನೇಹಮೂರ್ತಿಯಿಂದ ಅವರಿಗೆ ತಿರಸ್ಕಾರದ ಅನುಭವವಾಗುವುದಿಲ್ಲ. ನಾವಾತ್ಮರ ಮೇಲೆ ಇವರಿಗೆ ದಯೆಯಿದೆ ಎಂದು ಅನುಭವ ಮಾಡುತ್ತಾರೆ. ತಿರಸ್ಕಾರದ ಭಾವನೆಯ ಬದಲು ದಯೆಯ ಅನುಭವ ಮಾಡುತ್ತಾರೆ ಆದ್ದರಿಂದ ಸ್ನೇಹ ಹಾಗೂ ಸೇವೆ ಎರಡೂ ಜೊತೆಜೊತೆಯಲ್ಲಿ ಬೇಕಲ್ಲವೆ. ಹೇಗೆ ಮೆತ್ತನೆಯ (ಮಕ್ಮಲ್) ಚಪ್ಪಲಿಯಿಂದ ಹೊಡೆಯುವುದೆಂದು ಹೇಳುತ್ತಾರಲ್ಲವೆ. ಅದರ ಅರ್ಥವೇನೆಂದರೆ ಸೇವೆಯ ಜೊತೆಗೆ ಅತೀ ದಯೆಯೂ ಇರಲಿ, ಜೊತೆಜೊತೆಗೆ ಯಥಾರ್ಥ ಮಾತುಗಳನ್ನು ಯಥಾರ್ಥವಾಗಿ ಮುಂದಿಡುವ ಖುಷಿಯೂ ಇರಬೇಕು.

ವಿಷಯಗಳೆಲ್ಲವನ್ನೂ ಸ್ಪಷ್ಟವಾಗಿ ತಿಳಿಸಿ, ಆದರೆ ಸ್ನೇಹದ ಜೊತೆಗೆ, ಸ್ನೇಹಮೂರ್ತಿಗಳಾದಾಗ ಅವರಿಗೆ ಹೊಳೆಯುತ್ತಿರುವ ರೂಪದ ಅನುಭವವಾಗುವುದು. ಹೇಗೆ ತಾಯಿಯು ಮಗುವಿಗೆ ಭಲೆ ಎಂತಹದ್ದೇ ಶಬ್ದಗಳಲ್ಲಿ ಶಿಕ್ಷಣ ಕೊಡಲಿ ಆದರೆ ತಾಯಿಯ ಸ್ನೇಹದ ಕಾರಣ ಆ ಶಬ್ದಗಳು ಕಠಿಣವೆನಿಸುವುದಿಲ್ಲ. ತಾಯಿಯು ನಮ್ಮ ಸ್ನೇಹಿಯಾಗಿದ್ದಾರೆ, ಕಲ್ಯಾಣಕಾರಿಯಾಗಿದ್ದಾರೆ ಎಂದು ತಿಳಿದುಕೊಳ್ಳುತ್ತಾರೆ. ಹಾಗೆಯೇ ತಾವು ಎಷ್ಟಾದರೂ ಸ್ಪಷ್ಟಶಬ್ದಗಳಲ್ಲಿ ಹೇಳಿರಿ ಆದರೆ ಅವರಿಗೆ ಕಠಿಣವೆನಿಸುವುದಿಲ್ಲ ಆದ್ದರಿಂದ ಯಾವಾಗ ಇವೆರಡೂ ಸ್ವರೂಪದ ಸಮಾನತೆಯ ಸರ್ವೀಸ್ ಮಾಡುವಿರೋ ಆಗಲೇ ಸರ್ವೀಸಿನ ಸಫಲತೆಯನ್ನು ಸಮೀಪ ಕಾಣುತ್ತೀರಿ. ಎಲ್ಲಿಗೇ ಹೋದರೂ ನಿರ್ಭಯರಾಗಿ ಹೋಗುವಿರಿ, ಸತ್ಯತೆಯ ಶಕ್ತಿಸ್ವರೂಪರಾಗಿ ಆಲ್ಮೈಟಿ ಗವರ್ನಮೆಂಟ್‌ನ ಸಿ.ಐ.ಡಿ ಆಫೀಸರ್ ಆಗಿ, ಅದೇ ನಶೆಯಲ್ಲಿ ಹೋಗಿ, ಅದೇ ನಶೆಯಿಂದ ಮಾತನಾಡಿ, ನಶೆಯಿಂದ ನೋಡಿರಿ. ನಾವು ಅನುಚರ(ಫಾಲೋ)ರಾಗಿದ್ದೇವೆ. ಇದೇ ಸ್ಮೃತಿಯಿಂದ ಅಯಥಾರ್ಥವನ್ನು ಯಥಾರ್ಥತೆಯಲ್ಲಿ ತರಬೇಕಾಗಿದೆ, ಸತ್ಯವನ್ನು ಪ್ರಸಿದ್ಧ ಮಾಡಬೇಕೇ ಹೊರತು ಮುಚ್ಚಿಡಬಾರದು ಆದರೆ ಎರಡೂ ರೂಪಗಳ ಸಮಾನತೆ ಬೇಕು. ಯಾರನ್ನಾದರೂ ನೋಡುತ್ತೀರಿ ಅಥವಾ ಕೇಳುತ್ತೀರೆಂದರೆ ದಯಾಭಾವನೆಯಿಂದ ಕೇಳುತ್ತಾ ಇರುತ್ತೀರಾ ಅಥವಾ ಕಲಿಯುವ ಹಾಗೂ ಕಾಪಿ ಮಾಡುವ ಲಕ್ಷ್ಯದಿಂದ ಕೇಳುತ್ತೀರಾ, ನೋಡುತ್ತೀರಾ? ಯಾರೆಲ್ಲಾ ಈಗಿನ ಅಲ್ಪಕಾಲದ ಸುಖವನ್ನು ಭೋಗಿಸುವಂತಹ ಆತ್ಮರು ಪ್ರಕೃತಿ ದಾಸಿಯ ಶೋನಲ್ಲಿ ಕಾಣಿಸುತ್ತಾರೆ. ಅವರ ಶೋ ಅನ್ನು ನೋಡಿ ಸ್ಥಿತಿಯು ಹೇಗಿರುತ್ತದೆ? ಈ ಆತ್ಮರು ಈ ವಿಧಿ ಹಾಗೂ ಈ ಪದ್ಧತಿಯಲ್ಲಿ ಪ್ರಕೃತಿದಾಸಿಯ ರೂಪದಲ್ಲಿ ಸ್ಟೇಜಿನ ಮೇಲೆ ಪ್ರಖ್ಯಾತವಾಗಿದ್ದಾರೆ. ಆದ್ದರಿಂದ ನಾವೂ ಸಹ ಈ ರೀತಿ ಮಾಡಬೇಕು ಅಥವಾ ನಾವೂ ಸಹ ಇದರಂತೆ ನಮ್ಮಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕು- ಈ ಸಂಕಲ್ಪವು ಒಂದುವೇಳೆ ಬಂದರೂ ಸಹ ಅವರಿಗೆ ಏನೆಂದು ಹೇಳುವುದು? ದಾತನ ಮಕ್ಕಳು ಬಿಕಾರಿಗಳನ್ನು ಕಾಪಿ ಮಾಡಿದರೆ? ತಮ್ಮಮುಂದೆ ಎಷ್ಟಾದರೂ ಶೋನಲ್ಲಿ ಬರುವ ಆತ್ಮರಿರಬಹುದು ಆದರೆ ನಿಮ್ಮ ಭವಿಷ್ಯದ ರೂಪದ ಮುಂದೆ ಬಿಕಾರಿಗಳಾಗಿದ್ದಾರೆ. ಈ ಎಲ್ಲಾ ಆತ್ಮರು ಬಾಪ್‌ದಾದಾರವರ ಮಕ್ಕಳಿಂದ ಅಲ್ಪಸ್ವಲ್ಪ ಶಕ್ತಿಯ ಹನಿಗಳನ್ನು ಧಾರಣೆ ಮಾಡಿಕೊಂಡಿದ್ದಾರೆ. ತಮ್ಮೆಲ್ಲರ ಶಕ್ತಿಯ ಅಂಚಲಿಯನ್ನು ತೆಗೆದುಕೊಂಡು ಈ ಅಂಚಲಿಯ ಫಲವಾಗಿ ಪ್ರಕೃತಿದಾಸಿಯ ಫಲದ ರೂಪದಲ್ಲಿ ನೋಡುತ್ತಿದ್ದಾರೆ ಆದರೆ ಅಂಚಲಿಯನ್ನು ತೆಗೆದುಕೊಳ್ಳುವವರನ್ನು ನೋಡಿ, ಸಾಗರನ ಮಕ್ಕಳು ಏನಾಗುತ್ತಾರೆಂದು ಗೊತ್ತಿದೆಯೇ? ಪ್ರಭಾವಿತರಾಗಿ ಬಿಡುತ್ತಾರೆ. ಇವರೆಲ್ಲರೂ ಸ್ವಲ್ಪವೇ ಸಮಯದಲ್ಲಿ ತಮ್ಮೆಲ್ಲರ ಚರಣಗಳಿಗೆ ಬೀಳಲು ಚಡಪಡಿಸುತ್ತಾರೆ ಆದ್ದರಿಂದ ಸ್ನೇಹದ ಜೊತೆಗೆ ಸರ್ವೀಸಿನ ಉಮ್ಮಂಗವೂ ಇರಬೇಕು. ಹೇಗೆ ಆರಂಭದಲ್ಲಿ ಸ್ನೇಹವೂ ಇತ್ತು ಹಾಗೂ ಉಮ್ಮಂಗವೂ ಇತ್ತು. ನಿರ್ಭಯರಾಗಿದ್ದರು, ವಾತಾವರಣ ಹಾಗೂ ವಾಯುಮಂಡಲದಿಂದ ಅತೀತವಾಗಿದ್ದರು. ಆದ್ದರಿಂದ ಏಕರಸ ಸೇವೆಯ ಉಮ್ಮಂಗ

ಹಾಗೂ ಹುರುಪಿತ್ತು. ಈಗ ವಾಯುಮಂಡಲ ಹಾಗೂ ವಾತಾವರಣವನ್ನು ನೋಡಿ ಕೆಲವೊಂದುಕಡೆ ತಮ್ಮ ರೂಪರೇಖೆಯನ್ನು ಬದಲಾಯಿಸಿಬಿಡುತ್ತೀರಿ ಆದ್ದರಿಂದ ಸಫಲತೆ ಒಂದೊಂದುಬಾರಿ ಒಂದೊಂದು ರೀತಿ ಕಾಣಿಸುತ್ತದೆ. ಯಾವಾಗ ಕಲಿಯುಗದ ಅಂತ್ಯದ ಆತ್ಮರೇ ತಮ್ಮ ಸತ್ಯತೆಯನ್ನು ಸಿದ್ಧ ಮಾಡುವಲ್ಲಿ ನಿರ್ಭಯರಾಗಿ ಸ್ಟೇಜಿನ ಮೇಲೆ ಬರುತ್ತಾರೆ ಅಂದಮೇಲೆ ಪುರುಷೋತ್ತಮ ಸಂಗಮಯುಗೀ ಸರ್ವಶ್ರೇಷ್ಠ ಆತ್ಮರು ತಮ್ಮನ್ನು ಸತ್ಯಪ್ರಸಿದ್ಧ ಮಾಡುವುದರಲ್ಲಿ ವಾಯುಮಂಡಲದ ಪ್ರಮಾಣ ರೂಪರೇಖೆಯನ್ನು ಏಕೆ ಬದಲಾಯಿಸುತ್ತೀರಿ? ತಾವು ಮಾಸ್ಟರ್ ರಚಯಿತರಾಗಿದ್ದೀರಲ್ಲವೆ, ಅವರೆಲ್ಲರೂ ರಚನೆಯಲ್ಲವೆ. ರಚನೆಯನ್ನು ಮಾಸ್ಟರ್ ರಚಯಿತರು ಹೇಗೆ ನೋಡುವರು? ಯಾವಾಗ ಮಾಸ್ಟರ್ ರಚಯಿತನ ರೂಪದಲ್ಲಿ ನೋಡುತ್ತೀರೋ ಆಗ ಇದೆಲ್ಲಾ ಆಟವು ಹೇಗೆ ಕಾಣುವುದು? ಯಾವ ದೃಶ್ಯವನ್ನು ನೋಡುತ್ತೀರಿ? ಮಳೆ ಬಂದನಂತರ ಯಾವ ದೃಶ್ಯವನ್ನು ನೋಡುತ್ತೀರಿ? ಕಪ್ಪೆಗಳು ಸ್ವಲ್ಪನೀರಿನಲ್ಲಿ ಹೇಗೆ ಸಾಗರದಲ್ಲಿದ್ದೇವೆ ಎಂಬಂತೆ ಅನುಭವ ಮಾಡುತ್ತವೆ. ಟ್ರಾ ಟ್ರಾ ಎನ್ನುತ್ತಾ ನರ್ತಿಸುತ್ತಾ ಇರುತ್ತವೆ ಆದರೆ ಅದು ಅಲ್ಪಕಾಲದ ಸುಖದ ನೀರಾಗಿರುತ್ತದೆ. ಹಾಗೆಯೇ ಇವೆಲ್ಲಾ ಕಪ್ಪೆಗಳ ಟ್ರಾ ಟ್ರಾ ಎನ್ನುವ ಹಾಗೂ ನರ್ತಿಸುವ, ಕುಣಿಯುವ ದೃಶ್ಯ ಕಾಣಿಸುವುದು. ಈ ರೀತಿ ಅನುಭವ ಮಾಡುವಿರಿ- ಇವರು ಈಗೀಗ ಅಲ್ಪಕಾಲದ ಸುಖದಲ್ಲಿ ಉಬ್ಬುತ್ತಾ ಹೊರಟುಹೋಗುವರು. ಹೀಗೆ ಮಾಸ್ಟರ್ ರಚಯಿತನ ಸ್ಥಿತಿಯಲ್ಲಿದ್ದಾಗ ಈ ತರಹದ ದೃಶ್ಯವು ಕಾಣುವುದು. ಯಾವುದೇ ಸಾರವಿಲ್ಲವೆಂದು ಅನಿಸುವುದು, ಅರ್ಥವಿಲ್ಲದೆ ಮಾತನಾಡುತ್ತಿರುವವರು ಎನಿಸುವುದು. ಆದ್ದರಿಂದ ಸತ್ಯತೆಯನ್ನು ಪ್ರಸಿದ್ಧ ಮಾಡುವ ಸಾಹಸ ಹಾಗೂ ಉಲ್ಲಾಸ ಬರುತ್ತದೆಯೇ? ಸತ್ಯವನ್ನು ಪ್ರಸಿದ್ಧ ಮಾಡುವ ಉಮ್ಮಂಗ ಬರುತ್ತದೆಯೇ ಅಥವಾ ಇನ್ನೂ ಸಮಯವಿದೆಯೇ? ಇನ್ನೂ ಸತ್ಯವನ್ನು ಪ್ರಸಿದ್ಧ ಮಾಡುವುದರಲ್ಲಿ ಸಮಯ ಉಳಿದುಕೊಂಡಿದೆಯೇ? ನಶೆಯೂ ಇರಲಿ ಮತ್ತು ಹೊಳಪೂ ಇರಲಿ. ಇಂತಹ ನಶೆಯಿರಲಿ ಅದರಿಂದ ಎಲ್ಲರಿಗೂ ಅನುಭವವಾಗಬೇಕು. ಸತ್ಯದ ಮುಂದೆ ನಮ್ಮೆಲ್ಲರ ಅಲ್ಪಕಾಲದ ಈ ಆಡಂಬರ ನಡೆಯುವುದೇ ಇಲ್ಲ. ಹೇಗೆ ಸ್ಟೇಜಿನ ಮೇಲೆ ಡ್ರಾಮಾ ತೋರಿಸುತ್ತಾರಲ್ಲವೆ- ಹೇಗೆ ವಿಕಾರ ಕೈಜೋಡಿಸಿ ವಿದಾಯಿ ತೆಗೆದುಕೊಳ್ಳುತ್ತಾ, ತಲೆಬಾಗುತ್ತಾ ಹೊರಟುಹೋಗುತ್ತದೆ. ಈ ಡ್ರಾಮಾವನ್ನು ಈಗ ಪ್ರ್ಯಾಕ್ಟಿಕಲ್ ವಿಶ್ವದ ಸ್ಟೇಜಿನ ಮೇಲೆ ತೋರಿಸಬೇಕಾಗಿದೆ. ಈಗ ಈ ಡ್ರಾಮಾವನ್ನು ಹದ್ದಿನ ಸ್ಟೇಜಿನಿಂದ ಬೇಹದ್ದಿನ ಸ್ಟೇಜಿನಲ್ಲಿ ತನ್ನಿರಿ. ಇದನ್ನೇ ಸರ್ವೀಸ್ ಎಂದು ಹೇಳಲಾಗುತ್ತದೆ. ಇಂತಹ ಸೇವಾಧಾರಿಗಳು ವಿಜಯಮಾಲೆಯ ವಿಶೇಷ ಮಣಿಯಾಗುತ್ತಾರೆ. ಆದ್ದರಿಂದ ಇಂತಹ ಸೇವಾಧಾರಿಗಳಾಗಬೇಕಾಗಿದೆ. ಈಗಿನ್ನೂ ಈ ಅಭ್ಯಾಸ ಮಾಡುತ್ತಿದ್ದೀರಿ. ಮೊದಲು ಅಭ್ಯಾಸ ಮಾಡಲಾಗುತ್ತದೆ ನಂತರ ಚಿಕ್ಕ-ಚಿಕ್ಕ ಬೇಟೆಯಾಡುತ್ತಾರೆ. ಅದಾದನಂತರ ಸಿಂಹದ ಬೇಟೆ ನಡೆಯುತ್ತದೆ. ಅದೇರೀತಿ ಈ ಚಿಕ್ಕ ಡ್ರಾಮಾವನ್ನು ಪ್ರತ್ಯಕ್ಷದಲ್ಲಿ ನೋಡುವಿರಿ. ಆಗ ಒಂದುಕಡೆ ಜಯಜಯಕಾರ, ಮತ್ತೊಂದುಕಡೆ ಹಾಹಾಕಾರವಾಗುತ್ತದೆ. ಎರಡೂ ಒಂದೇ ಸ್ಟೇಜಿನ ಮೇಲೆ. ಒಳ್ಳೆಯದು-

ಅವ್ಯಕ್ತ ಮುರಳಿ 27-09-1971.

***ಸ್ನೇಹದ ಶಕ್ತಿಯ ಮೂಲಕ ಸತ್ಯತೆಯ ಪ್ರತ್ಯಕ್ಷತೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

***ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.***

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮನೆಗೆ ಹೋಗಬೇಕು ಎಂಬ ಸ್ಮೃತಿಯಿಂದ ಸೇವೆ ಮಾಡಿ ತಂದೆಯಿಂದ ಆಸ್ತಿ (ವಾರಸತ್ವವನ್ನು) ಸ್ವೀಕರಿಸಿ ಇತರರಿಗೂ ವಾರಸತ್ವವನ್ನು ಕೊಡಿಸಿದ್ದೇನೆ.

2. ನಾನು ಪ್ರತಿ ಹೆಜ್ಜೆಯಲ್ಲಿ ತಂದೆಯ ಸ್ಮೃತಿ, ಸೇವೆಯ ಸ್ಮೃತಿಯಲ್ಲಿದ್ದು, ಸದಾ ನಾನು ಈಶ್ವರೀಯ ಸೇವೆಗಾಗಿ ನಿಮಿತ್ತವಾಗಿದ್ದೇನೆ ಎಂಬ ಸ್ಮೃತಿಯಲ್ಲಿ ಕರ್ಮವನ್ನು ಆಚರಿಸಿ ಸದಾ ಕಲ್ಯಾಣವನ್ನೇ ಮಾಡಿದ್ದೇನೆ.

3. ನಾನು ಸ್ಥೂಲ ಕಾರ್ಯವನ್ನು ಮಾಡುತ್ತಲೂ "ಈ ಸಮಯ ಮನಸ್ಸಿನಿಂದ ವಿಶ್ವ ಪರಿವರ್ತನೆ ಮಾಡುವ ಸೇವೆಯಲ್ಲಿ ಉಪಸ್ಥಿತವಾಗಿದ್ದೇನೆ" ಎಂಬ ಸ್ಮೃತಿಯ ಸ್ವರೂಪ.

4. ನಾನು ಸದಾ ಸ್ವಯಂ ಅನ್ನು ವಿಶ್ವವೆಂಬ ವೇದಿಕೆಯ ಮೇಲೆ ಕಲ್ಯಾಣಕ್ಕಾಗಿ, ಸೇವಾರ್ಥ ಇರುವಂತೆ ಭಾವಿಸಿ ವ್ಯರ್ಥದಿಂದ ರಕ್ಷಿಸಿಕೊಂಡಿದ್ದೇನೆ.

5. ನಾನು ಒಂದು ಕಣ್ಣಲ್ಲಿ ತಂದೆಯ ಸ್ನೇಹ ಹಾಗೂ ಎರಡನೆಯ ಕಣ್ಣಲ್ಲಿ ತಂದೆಯಿಂದ ಲಭಿಸಿರುವ ಕರ್ತವ್ಯ ಅರ್ಥಾತ್ ಸೇವೆ - ಈ ಎರಡನ್ನೂ ಸ್ಮೃತಿಯಲ್ಲಿಟ್ಟಿರುವ ತಂದೆಯ ಅತಿಪ್ರಿಯವಾದ ಮಗು.

6. ನಾನು ಸೇವೆ ಮಾಡುವ ಸಮಯದಲ್ಲಿ ನನ್ನ ಸ್ಥಿತಿ ಸ್ನೇಹ ಮೂರ್ತಿಯಾಗಿ, ಶಕ್ತಿ ರೂಪವಾಗಿಸಿಕೊಂಡು ಪ್ರತ್ಯಕ್ಷವಾಗಿ ಮಾತಿನಲ್ಲಿ ಸ್ನೇಹದೊಂದಿಗೆ ಸಾರವನ್ನು ತುಂಬಿಕೊಂಡು ಸೇವೆಯ ಫಲಿತಾಂಶದಲ್ಲಿ ನಂಬರನ್ನು ಪಡೆದಿದ್ದೇನೆ.

7. ನಾನು ಅಯತಾರ್ಥ ವಿಷಯಗಳನ್ನು ಯಾರು ಹೇಳಿದರೂ ಯತಾರ್ಥ ವಿಷಯವನ್ನು ಸಂತೋಷದಿಂದ ಸ್ಪಷ್ಟವಾಗಿ ಹೇಳಿ ಸ್ನೇಹವನ್ನು ಅನುಭವ ಮಾಡಿಸಿರುವ ಜಗನ್ಮಾತೆಯ ಸ್ವರೂಪ.

8. ನಾನು ಅಯತಾರ್ಥವನ್ನು ಯತಾರ್ಥದಲ್ಲಿ ತಂದು ಸತ್ಯವನ್ನು ಪ್ರಸಿದ್ಧಿ ಮಾಡಿದ್ದೇನೆ.

9. ನಾನು ವಾತಾವರಣ ಮತ್ತು ವಾಯುಮಂಡಲದ ಪ್ರಭಾವಕ್ಕೆ ಅತೀತವಾಗಿರುವ ನಿರ್ಭಯ ಸ್ವರೂಪ.

10. ನಾನು ಧೈರ್ಯ, ಉತ್ಸಾಹ, ಉಲ್ಲಾಸದಿಂದ ಸತ್ಯತೆಯನ್ನು ಪ್ರಮಾಣೀಕರಿಸಿದ ಸತ್ಯ ಸ್ವರೂಪ.

11. ನಾನು ವಿಶ್ವವೆಂಬ ವೇದಿಕೆಯ ಮೇಲೆ ಸೇವಾಧಾರಿಯಾದ ವಿಜಯೀ ಮಾಲೆಯಲ್ಲಿ ವಿಶೇಷ ಮಣಿ.